(ಸಾಕ್ಷಿಯನ್ನು ದಿಃ 13-11-2019 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟಿ ಸವಾಲಿಗೆ ಒಳಪಡಿಸಲಾಯಿತು. )

(ಸಾಕ್ಷಿಗೆ ಕೊಂಕಣಿ ಭಾಷೆ ಮಾತ್ರ ಗೊತ್ತಿದ್ದು ಕನ್ನಡ ಭಾಷೆ ಬಾರದೇ ಇದ್ದುದರಿಂದ ಶ್ರೀ ವಿ ಬಿ ಪಿ ವಕೀಲರನ್ನು ಭಾಷಾಂತರಕಾರನ್ನಾಗಿ ನೇಮಿಸಿ ಪ್ರಮಾಣ ವಚನವನ್ನು ಭೋಧಿಸಿ ಪ್ರತಿಜ್ಞಾ ಪೂರ್ವಕವಾಗಿ ತರ್ಜುಮೆಗೊಳಿಸಲು ನೇಮಿಸಿಕೊಳ್ಳಲಾಯಿತು).

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರವಾಗಿಃಶ್ರೀ ವಿ ಎ ಟಿ ವಕೀಲರಿಂದಃ**

ನನ್ನ ತಾಯಿ ಮರಿಯಾಂಬಿ ಈಗ್ಗೆ 35 ವರ್ಷಗಳ ಹಿಂದೆ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ. ದಾವಾ ಆಸ್ತಿಯ ಮೂಲ ಸರ್ವೆ ನಂ. 8 ಅ 1 ಕ ಎಂದು ಇತ್ತು ಎಂದರೆ ಸರಿ. ದಾವಾ ಆಸ್ತಿಯನ್ನು 1979 ರಲ್ಲಿ ಅಬ್ದುಲ್ ರಜಾಕ್, ಕುಲ್ಸುಂಬಿ ಹಾಗೂ ನನ್ನ ತಾಯಿ ಮರಿಯಾಂಬಿ ಖರೀದಿಸಿರುತ್ತಾರೆ ಎಂದರೆ ನಿಜ. ಅಬ್ದುಲ್ ರಜಾಕ ಮತ್ತು ಕುಲ್ಸುಂಬಿರವರ ಜಂಟಿ ಹೆಸರಲ್ಲಿ 5 ಗುಂಟೆ 3 ಆಣೆ ಜಮೀನನ್ನು ಮತ್ತು ನನ್ನ ತಾಯಿಯ ಹೆಸರಿನಲ್ಲಿ 3 ಗುಂಟೆ 11 ಆಣೆ ಜಮೀನನ್ನು ಖರೀದಿಸಲಾಯಿತು ಎಂದರೆ ನಿಜ. ನಂತರ 1989 ರಲ್ಲಿ ಸದರಿ ಅಬ್ದುಲ್ ರಜಾಕ್ ಮತ್ತ ಕುಲ್ಸುಂಬಿರವರು ತಾವು ಖರೀದಿಸಿದ 5 ಗುಂಟೆ 3 ಆಣೆ ಪೈಕಿ 2 ಗುಂಟೆ 4 ಆಣೆ ಜಮೀನನ್ನು ಸೈಯದ್ ಜಮೀರ್ ಅಬ್ದುಲ್ ರೆಹಮಾನರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನಿಜ. ನಂತರ ಸೈಯದ್ ಜಮೀರ್ ಅಬ್ದುಲ್ ರೆಹಮಾನರವರ ಹೆಸರಿಗೆ ಮಾರಾಟ ಮಾಡಿದ 2 ಗುಂಟೆ 4 ಆಣೆ ಜಮೀನಿಗೆ ಸರ್ವೆ ನಂ. 8 ಅ 1 ಕ ಹಿಸ್ಸಾ ಕ 1 ಅಂತಾ ಆಯಿತು ಎಂದರೆ ನಿಜ. ಅಬ್ದುಲ್ ರಜಾಕ್, ಕುಲ್ಸುಂಬಿ ಮತ್ತು ನಮ್ಮ ತಾಯಿಗೆ ಸೇರಿದ ಒಟ್ಟೂ 7 ಗುಂಟೆ 4 ಆಣೆ ಜಮೀನಿಗೆ ಸರ್ವೆ ನಂ. 8 ಅ 1 ಕ ಹಿಸ್ಸಾ ಕ 2 ಅಂತಾ ಆಯಿತು ಎಂದರೆ ನಿಜ. ಸದರಿ ಸರ್ವೆ ನಂಬರುಗಳು ಇಲ್ಲಿಯ ತನಕ ಬದಲಾವಣೆ ಆಗಿಲ್ಲ ಎಂದರೆ ನಿಜ. ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿ ಮಾರಾಟ ಮಾಡಿದ ಜಮೀನಿನ ಬಗ್ಗೆ ನಾವು ತಕರಾರು ಎತ್ತಲಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಸದರಿ ಮಾರಾಟ ಪ್ರಕ್ರಿಯೆಯಲ್ಲಿ ನಾನೂ ಸಹ ಭಾಗಿಯಾಗಿದ್ದೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರ ಪಡಿಸಿಲ್ಲ. ನಾನು ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿ ಬರೆದುಕೊಟ್ಟ ಕ್ರಯ ಪತ್ರಕ್ಕೆ ಪಕ್ಷಗಾರನಲ್ಲ ಎಂದರೆ ನಿಜ. ಆದರೆ ಮಾರಾಟದ ಪ್ರಕ್ರಿಯೆಯಲ್ಲಿ ನಾನು ಭಾಗವಹಿಸಿದ್ದೆ. ಕ್ರಯ ಪತ್ರವನ್ನು ತಯಾರು ಮಾಡುವುದರಲ್ಲಿ ನಾನು ಸಹಾಯ ಮಾಡಿದ್ದೆ. ಕಂದಾಯ ದಾಖಲಾತಿಗಳಲ್ಲಿ ನನ್ನ ಹೆಸರು ಇರುವುದಿಲ್ಲ. ಆದರೆ ನನ್ನ ತಾಯಿಯ ಹೆಸರು ಇರುತ್ತದೆ.

ನಾನು ಬಾಡ 1 ಗ್ರಾಮದ ಸರ್ವೆ ನಂ. 5 ಜಿ ಹಿಸ್ಸಾ 2 ರಲ್ಲಿ ಐದುವರೆ ಆಣೆ ಜಮೀನನ್ನು ಅಂದಾಜು 1994 ರಲ್ಲಿ ಖರೀದಿಸಿರುತ್ತೇನೆ. ನಾನು ಮತ್ತು ಅಬ್ದುಲ್ ರಜಾಕ್ ಇಬ್ಬರು ಸೇರಿ ಬಾಡ 1 ಗ್ರಾಮದ ಸರ್ವೆ ನಂ. 5 ಜಿ ಹಿಸ್ಸಾ 2 ರಲ್ಲಿ ಐದುವರೆ ಆಣೆ ಜಮೀನನ್ನು ಖರೀದಿಸಿದ್ದೇವೆ ಎಂದರೆ ಸರಿ. ಖರೀದಿ ಪತ್ರದ ಆಧಾರದ ಮೇಲೆ ನನ್ನ ಮತ್ತು ಅಬ್ದುಲ್ ರಜಾಕರವರ ಹೆಸರು ಕಂದಾಯ ದಾಖಲಾತಿಗಳಲ್ಲಿ ನಮೂದಾಗಿರುತ್ತದೆ ಎಂದರೆ ನಿಜ. ಸದರಿ ಹಕ್ಕು ಬದಲಾವಣೆ ದಾಖಲಾತಿಯನ್ನು ಇಲ್ಲಿಯ ತನಕ ನಾನು ಪ್ರಶ್ನಿಸಿಲ್ಲ ಎಂದರೆ ನಿಜ. ನಾನು ಮತ್ತು ಅಬ್ದುಲ್ ರಜಾಕ ಜಂಟಿಯಾಗಿ 1979 ರಲ್ಲಿ ಅಲ್ಯೂಮಿನಿಯಂ ಅಂಗಡಿ ವ್ಯಾಪಾರ ಮಾಡುತ್ತೀದ್ದೆವು. ಈ ಬಗ್ಗೆ ನಾನು ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರ ಪಡಿಸಿಲ್ಲ ಎಂದರೆ ನಿಜ.

ನಾನು 1948 ನೇ ಸಾಲಿನಲ್ಲಿ ಜನಿಸಿರುತ್ತೇನೆ. ದಾವಾ ಆಸ್ತಿಯ ಪೈಕಿ 3 ಗುಂಟೆ 9 ಆಣೆ ಜಾಗವು ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿಯಲ್ಲಿ ನನಗೂ ಸಹ ಹಕ್ಕು ಇರುತ್ತದೆ ಎಂದು ನುಡಿದಿರುತ್ತಾರೆ. ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿರವರಿಗೆ ಸೇರಿದ 3 ಗುಂಟೆ 9 ಆಣೆ ಜಾಗದಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಕುಟುಂಬದೊಂದಿಗೆ ಕಾಜುಬಾಗದ ಅಮೀದ್ ಕಂಪೌಂಡ್‌ನಲ್ಲಿ 15 ರಿಂದ 17 ವರ್ಷದಿಂದ ವಾಸವಾಗಿರುತ್ತೇನೆ ಎಂದರೆ ನಿಜ.

ದಾವಾ ಆಸ್ತಿಯಲ್ಲಿರುವ ಸಿಎಮ್ ಸಿ ಮನೆ ನಂ. 1432/1 ರ ಸ್ವತ್ತು ಅಬ್ದುಲ್ ರಜಾಕ ಮತ್ತು ಕುಲ್ಸುಂಬಿರವರ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ಸದರಿ ಮನೆಯನ್ನು ಅಬ್ದುಲ್ ರಜಾಕರವರು ಮಾತ್ರ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದರೆ ನಾನು ಮತ್ತು ಅಬ್ದುಲ್ ರಜಾಕರವರು ಸೇರಿ ಜಂಟಿಯಾಗಿ ಕಟ್ಟಿರುತ್ತೇವೆ. ಹಮೀದ್ ಕಂಪೌಂಡ್‌ನಲ್ಲಿ ನಾನು ವಾಸವಾಗಿರುವ ಮನೆಯು ಬಾಡಿಗೆ ಮನೆಯಾಗಿರುತ್ತದೆ. ಸದರಿ ಮನೆಯ ನಂಬರು 1878/3 ಅಂತಾ ಇರುತ್ತದೆ ಎಂದರೆ ನಿಜ. ಸಿ ಎಮ್ ಸಿ ನಂ. 1432/1 ರ ಮನೆಯಲ್ಲಿ ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿ ಮಾತ್ರ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಸದರಿ ಮನೆಯು ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿ. ಅಬ್ದುಲ್ ರಜಾಕ ಮತ್ತು ಕುಲ್ಸುಂಬಿರವರಿಗೆ ನಾನು ನೋಡಿಕೊಂಡು ಚಿಕಿತ್ಸೆ ಕೊಡಿಸಿರುವ ಬಾಬ್ತು ಈಗ ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ. ನಾನು ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿರವರಿಗೆ ನೋಡಿಕೊಳ್ಳದ ಕಾರಣ ಮತ್ತು ಚಿಕಿತ್ಸೆ ಕೊಡಿಸದ ಕಾರಣ ನನ್ನ ಹತ್ತಿರ ಆ

ರೀತಿ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿರವರ ಆರೋಗ್ಯವನ್ನು ಪ್ರತಿವಾದಿ ನೋಡಿಕೊಳ್ಳುತ್ತಿದ್ದನು ಎಂದರೆ ಸರಿಯಲ್ಲ.

ನಿಪಿ-3 ರ ದಾಖಲಾತಿಯನ್ನು ಮಸೀದಿಗೆ ಯಾರೂ ಬೇಕಾದರೂ ಬರೆದುಕೊಡಬಹುದು ಎಂದರೆ ಸರಿಯಲ್ಲ. ನಿಪಿ-3 ರ ದಾಖಲಾತಿಯನ್ನು ಕೇಸಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಮಸೀದಿಯವರು ಅಬ್ದುಲ್ ರಜಾಕರವರ ಶವ ಸಂಸ್ಕಾರವನ್ನು ಮಾಡಲು ನಮಗೆಅನುಮತಿ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ಅಬ್ದುಲ್ ರಜಾಕರವರ ಶವ ಸಂಸ್ಕಾರವನ್ನು ನಾವು ಮಾಡಿರುವ ಬಗ್ಗೆ ನಿಪಿ-3 ರ ದಾಖಲಾತಿಯನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ-3 ಕ್ಕೆ ನಾನು ಸಹಿ ಹಾಕಿಲ್ಲ ಎಂದರೆ ನಿಜ. ನಾನು ಅಬ್ದುಲ್ ರಜಾಕರವರ ಶವ ಸಂಸ್ಕಾರವನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ಗಲ್ಫ್ ದೇಶದಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರ ಪಡಿಸಿಲ್ಲ. ಪ್ರತಿವಾದಿಯು ಅಬ್ದುಲ್ ರಜಾಕರವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಕಾರಣ ಅವರು ದಾವಾ ಆಸ್ತಿಯನ್ನು ಪ್ರತಿವಾದಿಯರಿಗೆ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅಬ್ದುಲ್ ರಜಾಕರವರು ದಾಖಲಾತಿಗೆ ಸಹಿ ಹಾಕುತ್ತಿದ್ದರು. ಆದರೆ ಕುಲ್ಸುಂಬಿರವರಿಗೆ ಸಹಿ ಮಾಡಲು ಬರುತ್ತಿರಲಿಲ್ಲ. ದಾನ ಪತ್ರವು ನೊಂದಣಿಯಾದ ದಾಖಲಾತಿ ಎಂದರೆ ನಿಜ. ದಾನ ಪತ್ರದ ಆಧಾರದ ಮೇಲೆ ಪ್ರತಿವಾದಿಯ ಹೆಸರು ಆರ್ ಟಿ ಸಿ ದಾಖಲಾತಿಯಲ್ಲಿ ನಮೂದಾಗಿದೆ ಎಂದರೆ ನಿಜ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಹಕ್ಕು ಇಲ್ಲದ ವಿಷಯ ಚೆನ್ನಾಗಿ ಗೊತ್ತಿದ್ದರೂ ಸಹ ಪ್ರತಿವಾದಿಗೆ ತ್ರಾಸ ಕೊಡಲು ಸುಳ್ಳು ದಾವೆ ಹೂಡಿ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷಿ ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ಅಬ್ದುಲ್ ರಜಾಕ್ ಮತ್ತು ಕುಲ್ಸುಂಬಿರವರು ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಬಾಬ್ತು ದಾನ ಪತ್ರ ಮಾಡಿರುವ ವಿಚಾರ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ಮನೆಗೆ ಪ್ರತಿವಾದಿಯೇ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಕಾರವಾರ.